

# ಪರ್ವತಗಳ ಜೊತೆಯಲ್ಲಿ ಮಳೆಯೊಂದಿಗೆ ಪಯಣ

ಹಿಮಪರ್ವತಗಳಿಗೆ ಕನ್ನಡಿ ಹಿಡಿದಂತಿರುವ ಮನೋಹರ ಚಂಗು ಸರೋವರ

**ಸಿಕ್ಕಿಂ ಪ್ರವಾಸ ಎಂದರೆ ಪ್ರಕೃತಿಯೊಂದಿಗೆ ಸಖ್ಯ ಬೆಳೆಸಿದಂತೆ. ಹಿಮಾಲಯದ ಸೌಂದರ್ಯವನ್ನು ಆಸ್ವಾದಿಸುವುದರ ಜೊತೆಗೆ, ಪರ್ವತಗಳ ಕಡಿದಾದ ದಾರಿಗಳಲ್ಲಿ ಸಾಗುವ ರೋಚಕ ಅನುಭವವೂ ಪ್ರವಾಸಿಗರದಾಗುತ್ತದೆ. 'ಸಂಪೂರ್ಣ ಸಾವಯವ' ಎನ್ನುವ ಹೆಗ್ಗಳಿಕೆಯ ಈ ರಾಜ್ಯ ಪ್ರಕೃತಿ ಸೌಂದರ್ಯದೊಂದಿಗೆ ಸೌಹಾರ್ದಕ್ಕೂ ಹೆಸರುವಾಸಿ.**

■ **ಶ್ರೀನಿವಾಸ ಜೋಕಟ್ಟೆ**

'ಈಗ ನೀವು ಪರ್ವತಗಳ ಜೊತೆಗೆ ಮತ್ತು ಮಳೆಯ ಜೊತೆಗೆ ಪಯಣಿಸುತ್ತಿದ್ದೀರಿ. ಪ್ರವಾಸದ ನೈಜ ಸುಖ ಈಗಲೇ ನಿಮಗೆ ಸಿಗುವುದು...'

ಸಿಕ್ಕಿಂನ ರಾಜಧಾನಿ ಗ್ಯಾಂಗ್ಟಕ್‌ನಿಂದ ಚೀನಾ ಬಾರ್ಡರ್ ನಥುಲಾಕ್ಕೆ ಹೋಗಲು ನಮ್ಮ ಜೀಪ್ ಪರ್ವತ ರಸ್ತೆಯಲ್ಲಿ ಓಡುತ್ತಿತ್ತು. ನೇಪಾಳಿ ಡ್ರೈವರ್ ಹೇಳಿದ ಮಾತಿನಲ್ಲಿ ಮೇಲಿನ ಮಾತಿನಲ್ಲಿ ಯಾವ ಸುಳ್ಳೂ ಕಾಣಲಿಲ್ಲ.

ಬೌದ್ಧಧರ್ಮದ ಇರುವನ್ನು ಸೂಚಿಸುವ ಬಣ್ಣಬಣ್ಣದ ಧ್ವಜಗಳು ಎತ್ತರದ ಶಿಖರಗಳಲ್ಲಿ ಹಾರುತ್ತಾ ಶಾಂತಿಯ ಸಂದೇಶ ಸಾರುತ್ತಿದ್ದವು. ನಥುಲಾಕ್ಕೆ ಹೋಗಲು ಮಿಲಿಟರಿಯವರ ಅನುಮತಿಯನ್ನೂ ಮೊದಲೇ ಪಡೆದುಕೊಂಡಿದ್ದೆವು.

ವಿಶ್ವದ ಮೂರನೇ ಅತಿದೊಡ್ಡ ಪರ್ವತ ಕಾಂಚನಜಂಗಾ ಮಡಿಲಲ್ಲಿರುವ ರಾಜ್ಯ ಸಿಕ್ಕಿಂ. ಪೂರ್ವೋತ್ತರ ರಾಜ್ಯಗಳಲ್ಲಿ ಇದು ಅತ್ಯಂತ ಶಾಂತಿಯುತ ರಾಜ್ಯ. ಆದರೆ ಅಲ್ಲಿನ ರಸ್ತೆಗಳು ಅತ್ಯಂತ ಅಪಾಯಕಾರಿ ಪರ್ವತ ಮಾರ್ಗಗಳು. ಹಾಗಾಗಿ ಚಾಲಕರು ಸದಾ ಎಚ್ಚರದಿಂದ ಇರುತ್ತಾರೆ. ತೀವ್ರ ಮಳೆ ಮತ್ತು ಭೂಕುಸಿತ ಅಲ್ಲಿನ ಸಾಮಾನ್ಯ ದೃಶ್ಯಗಳಾಗಿವೆ.

ದಾರಿಯಲ್ಲೆಲ್ಲ ಸೇನಾ ವಾಹನಗಳ ಓಡಾಟ. ಅಪರೂಪಕ್ಕೆ ಒಂದೊಂದು ಅಂಗಡಿಗಳು ಕಾಣುತ್ತವೆ. ಮಾಹಿತಿ ಬೇಕು ಅಂದರೆ, ಸೇನೆಯ ಸ್ಯಾಟಲೈಟ್ ಫೋನ್ ಮತ್ತು ಟ್ಯಾಕ್ಸಿ ಡ್ರೈವರ್‌ಗಳು ನೀಡುವ ಮಾಹಿತಿಗಳು ಅಷ್ಟೇ. ಎಲ್ಲೆಂದರಲ್ಲಿ ಫೋಟೊ ಕ್ಲಿಕ್ಕಿಸುವಂತಿಲ್ಲ.

ನಮ್ಮ ಪಯಣ ಚೀನಾ ಬಾರ್ಡರ್ ನಥುಲಾ ಕಡೆಗೆ ಹೊರಟಿತ್ತು. ನಥುಲಾದ ಮೊದಲಿಗೆ ಚಂಗು ಸರೋವರ ಸಿಗುತ್ತದೆ. 12,000 ಅಡಿ ಎತ್ತರದ ಚಂಗು ಸರೋವರ ಗ್ಯಾಂಗ್ಟಕ್‌ನಿಂದ ಸುಮಾರು 40 ಕಿ.ಮೀ. ದೂರದಲ್ಲಿ ಇದೆ. ನಥುಲಾ ಸುಮಾರು 56 ಕಿ.ಮೀ. ದೂರವಿದೆ.

ಚಂಗು ಸರೋವರ ಬಹು ಪ್ರಸಿದ್ಧವಾದುದು. ಅಲ್ಲಿನ ಪ್ರಮುಖ ಆಕರ್ಷಣೆ ಯಾಕ್ ಸವಾರಿ. ಯಾಕ್ ಅಂದರೆ ಮೈತುಂಬ ಕೂದಲು ಇರುವ ಹಿಮಾಲಯದ ಕೋಣ. ಚಂಗು ಸಿಕ್ಕಿಂನ ಪ್ರಮುಖ